ಕಛೇರಿ ವಿಳಾಸ:
ಬೆಂಗಳೂರು ರಸ್ತೆ
ವಾರ್ಡ್ 10, ಎನ್ ಆರ್ ಬಡಾವಣೆ
ಚಿಂತಾಮಣಿ- 563 125

ದೂರವಾಣಿ : 08154-252056 / ಸಹಾಯವಾಣಿ : 08154-252117
ಇ-ಮೇಲ್ : itstaff_ulb_chintamanicity@yahoo.in
cmc.chintamani@gmail.com
ವೆಬ್‌ಸೈಟ್ : www.chintamanicity.gov.in

# ನಗರಸಭಾ ಕಾರ್ಯಾಲಯ ಚಿಂತಾಮಣಿ

ಚಿಕ್ಕಬಳ್ಳಾಪುರ ಜಿಲ್ಲೆ.

ನಂ.ನಸಚಿ/ತಾಶಾ/ಸಿಆರ್/132/2019-20

ದಿನಾಂಕ: 02/06/2020

ರವರಿಗೆ,

ಉಪ ಅರಣ್ಯ ಸಂರಕ್ಷಣಾಧಿಕಾರಿಗಳು,
ಪ್ರಾದೇಶಿಕ ಅರಣ್ಯ, ಚಿಕ್ಕಬಳ್ಳಾಪುರ
ಚಿಕ್ಕಬಳ್ಳಾಪುರ ಜಿಲ್ಲೆ.

ಮಾನ್ಯರೇ,

ವಿಷಯ: ಚಿಂತಾಮಣಿ ನಗರಕ್ಕೆ ಭಕ್ತರಹಳ್ಳಿ ಅರಸೀಕೆರೆ ಮೂಲದಿಂದ ನೀರು ಸರಬರಾಜು ಮಾಡುವ ಕಾಮಗಾರಿಗಳನ್ನು ಕೈಗೊಳ್ಳಲು ಅರಣ್ಯ ಇಲಾಖೆಯ ವತಿಯಿಂದ ಅನುಮತಿ ನೀಡಲು ಕೋರಿ.

ಉಲ್ಲೇಖ: 1) ಸರ್ಕಾರದ ಆದೇಶದ ಸಂಖ್ಯೆ: ಯು.ಡಿ.ಡಿ./414/2018 ದಿನಾಂಕ: 17-5-2019.
2)ನೋಡಲ್ ಅಧಿಕಾರಿ, ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ ಬೆಂಗಳೂರು ರವರ ಇ-ಮೇಲ್ ಪತ್ರದ ದಿನಾಂಕ 21-5-2020.

* * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಚಿಂತಾಮಣಿ ನಗರಕ್ಕೆ ಭಕ್ತರಹಳ್ಳಿ ಅರಸೀಕೆರೆಯಿಂದ ನೀರು ಸರಬರಾಜು ಮಾಡುವ ಯೋಜನೆಗೆ ಸರ್ಕಾರದಿಂದ ಉಲ್ಲೇಖ(1) ರ ಪತ್ರದಲ್ಲಿ ನಗರೋತ್ಥಾನ-3 ರ ಯೋಜನೆ ಅಡಿಯಲ್ಲಿ ಅನುಮೋದನೆ ದೊರೆತ್ತಿರುತ್ತದೆ. ನೀರು ಸರಬರಾಜು ಮಾಡುವ ಕಾಮಗಾರಿಗಳನ್ನು ಕೈಗೊಳ್ಳಲು ಭಕ್ತರಹಳ್ಳಿ ಅರಸೀಕೆರೆಯ ಅಂಗಳದಲ್ಲಿ ಪಂಪ್ ಹೌಸ್ ನಿರ್ಮಾಣ, ಟ್ರಾನ್ಸ್‌ಫಾರ್ಮರ್ ಯಾರ್ಡ್ ಮತ್ತು 879 ಮೀಟರ್ ಉದ್ದದ ಕೊಳವೆ ಮಾರ್ಗವನ್ನು ಅರಣ್ಯ ಇಲಾಖೆಗೆ ಸೇರಿದ ಸರ್ವೆ ನಂ. 75 ಮತ್ತು 10 ರಲ್ಲಿ ಕೈಗೊಳ್ಳಬೇಕಾಗಿದ್ದು, 0.633 ಎಕ್ಟರ್ ಜಮೀನು ಬೇಕಾಗಿರುತ್ತದೆ. ಅರಣ್ಯ ಇಲಾಖೆಯ ಅನುಮೋದನೆ ಪಡೆಯಲು ಪ್ರಸ್ತಾವನೆಯನ್ನು ದಿನಾಂಕ 19-2-2020 ರಲ್ಲಿ ಅರಣ್ಯ ಇಲಾಖೆಗೆ ಸಲ್ಲಿಸಲಾಗಿತ್ತು.

ಮುಂದುವರಿದಂತೆ, ಸದರಿ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಬೆಂಗಳೂರಿನಲ್ಲಿ ಪರಿಶೀಲನೆ ಮಾಡಿದ್ದು ಸಂಭಂದ ಪಟ್ಟ ದಾಖಲೆಗಳನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಪ್ರಾದೇಶಿಕ ಅರಣ್ಯ, ಚಿಕ್ಕಬಳ್ಳಾಪುರ ರವರಿಗೆ ಸಲ್ಲಿಸಲು ಉಲ್ಲೇಖ(2)ರಲ್ಲಿ ತಿಳಿಸಿರುತ್ತಾರೆ. ಆದುದರಿಂದ, ಸಂಭಂದಿಸಿದ ದಾಖಲೆಗಳನ್ನು ಈ ಪತ್ರದೊಂದಿಗೆ ಲಗತ್ತಿಸಿದ್ದು ಕಾಮಗಾರಿಗಳನ್ನು ಕೈಗೊಳ್ಳಲು ಅನುಮತಿ ನೀಡಬೇಕೆಂದು ತಮ್ಮಲ್ಲಿ ಕೋರಲಾಗಿದೆ.

ಅಡಕ: ಪ್ರಸ್ತಾವನೆ – 6 ಪ್ರತಿಗಳು

ತಮ್ಮ ವಿಶ್ವಾಸಿ,

2/6/20

ಪೌರಾಯುಕ್ತರು,
ನಗರಸಭೆ, ಚಿಂತಾಮಣಿ.

3/6/2020

C:\Users\Admin\Downloads\Forest_dept_ltr_from_CMC.doc

Scanned with CamScanner